**ದಿನಾಂಕಃ 04.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯು ವಿಲ್ ಯಾ ಮರಣ ಶಾಸನ ಪತ್ರ ದಿಃ 23.08.2003 ಆಗಿದ್ದು, ಸಾಕ್ಷಿಗೆ ಅದರಲ್ಲಿ "ಸದರಿ ವಿಲ್‌ನಲ್ಲಿ ನಮೂದು ಮಾಡಿರುವ ಸ್ವತ್ತುಗಳು ನನ್ನ ಮರಣಾ ನಂತರ ನನ್ನ ಖಾಸ ಧರ್ಮಪತ್ನಿಯಾದ ಶ್ರೀಮತಿ ಶಾರದಮ್ಮ ಕೋಂ ರಾಮಯ್ಯರವರಿಗೆ ಸೇರತಕ್ಕದ್ದು ಎಂಬುದಾಗಿ ವಿಲ್ ಬರೆಯಿಸಿರುತ್ತೇನೆ." ನಮೂದು ಇರುತ್ತದೆ ಎಂದು ಓದಿ ಹೇಳಲಾಗಿ ಸಾಕ್ಷಿಯು ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಗುರುತಿಸಿದ ವಿಲ್‌ನ್ನು ನಿಡಿ-1 ಎಂದು ಮತ್ತು ಹೇಳಿಕೆಯ ಭಾಗವನ್ನು ನಿಡಿ-1(ಎ) ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ರಾಮಯ್ಯರವರು ನಿಡಿ-1 ರಲ್ಲಿ ನಮೂದಿಸಿರುವ ಆಸ್ತಿಗಳು ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಆಸ್ತಿಗಳು ಎಂದು ನಮೂದು ಮಾಡಿಲ್ಲ ಎಂದರೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ವಿಲ್‌ನ್ನು ಸೃಷ್ಟಿಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-1 ರಲ್ಲಿ "ನನ್ನ ಮರಣಾ ನಂತರ ನನ್ನ ಖಾಸಾ ಧರ್ಮ ಪತ್ನಿಯಾದ ಶ್ರೀಮತಿ ಶಾರದಮ್ಮನವರು ಸದರಿ ವಿಲ್‌ನಲ್ಲಿ ನಮೂದು ಮಾಡಿರುವ ಷೆಡ್ಯೂಲ್ ಸ್ವತ್ತುಗಳ ಖಾತೆ ವಗೈರೆಗಳನ್ನು ಅವರ ಹೆಸರಿಗೆ ವರ್ಗಾವಣೆ ಮಾಡಿಕೊಂಡು" ಎಂದು ನಮೂದು ಇರುತ್ತದೆ ಎಂದರೆ ಸರಿ. ಹಾಗೂ ಅದರಲ್ಲಿರುವ ಛಾಯಾಚಿತ್ರ ರಾಮಯ್ಯರವರ ಛಾಯಾಚಿತ್ರವಾಗಿರುತ್ತದೆ ಎಂದರೆ ಸರಿ.

ರಾಮಯ್ಯರವರು ಕಾನೂನು ಬಾಹಿರವಾಗಿ ಎಲ್ಲಾ ಆಸ್ತಿಗಳನ್ನು ಶಾರದಮ್ಮರವರ ಹೆಸರಿಗೆ ಬರೆದಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನನ್ನ ವಾದಪತ್ರದಲ್ಲಿಯೂ ಸಹ ಬರೆದಿರುವುದಿಲ್ಲ ಎಂದರೆ ಸರಿ. ಮುಖ್ಯವಿಚಾರಣಾ ಪ್ರಮಾಣ ಪತ್ರದ ಪ್ಯಾರಾ 9 ರಲ್ಲಿ

ಹೇಳಿರುವ ವಿಚಾರವನ್ನು ವಾದಪತ್ರದಲ್ಲಿ ತಿಳಿಸಿರುತ್ತೇನೆ. ರಾಮಯ್ಯರವರಿಗೆ ವಿಲ್ ಬರೆಯಲು ಅಧಿಕಾರ ಇರುವುದಿಲ್ಲ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ದಾಖಲೆಗಳನ್ನು ಹಾಜರುಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ24.09.2004 ರಲ್ಲಿ ರಾಮಯ್ಯರವರು ನಿಧನ ಹೊಂದಿರುತ್ತಾರೆ ಎಂದರೆ ಸರಿ. ನಿಪಿ-3 ರಲ್ಲಿ ವಿಲ್ಲಿನ ಆಧಾರದ ಮೇಲೆ 1 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿರುತ್ತದೆ ಎಂದು ನಿಪಿ-3 ರಲ್ಲಿ ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ದಿಃ 20.12.2004 ರ ಒಳಗೆ ರಾಮಯ್ಯರವರು ನಿಧನ ಹೊಂದಿದ್ದು, ಅವರ ನಿಧನಕ್ಕೂ ಮೊದಲು ವಿಲ್‌ನ್ನು ಬರೆದಿದ್ದು, ಅವರ ನಿಧನದ ನಂತರ ಸದರಿ ವಿಲ್ ಜಾರಿಗೆ ಬಂದು, ಅದರ ಆಧಾರದ ಮೇಲೆ 1 ನೇ ಪ್ರತಿವಾದಿಯ ಹೆಸರಿಗೆ ಖಾತಾ ಬದಲಾವಣೆಯಾಗಿರುತ್ತದೆ ಎಂದರೆ ಯಾವುದೇ ವಿಲ್‌ನ್ನು ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿ-19 ರಲ್ಲಿ ಇರುವ ಆಸ್ತಿಯನ್ನು ವಾದ ಪತ್ರದಲ್ಲಿ ದಾವಾ ಆಸ್ತಿಯನ್ನಾಗಿ ಸೇರಿಸಿ ಅದರಲ್ಲಿಯೂ ಸಹ ಭಾಗವನ್ನು ಕೇಳಿರುತ್ತೇನೆ ಎಂದರೆ ಸರಿ. ನಿಪಿ-19 ರಲ್ಲಿ ಇರುವಂತಹ ಆಸ್ತಿಯನ್ನು ಯಾರು, ಯಾವಾಗ ಕೊಂಡಿದ್ದರು ಹಾಗೂ ಮಾರಿದ್ದರು ಎಂದು ವಾದಪತ್ರದಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿಯು ರಾಮಯ್ಯರವರು ಖರೀದಿ ಮಾಡಿದ್ದರು ಎಂದು ನುಡಿಯುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ರಾಮಯ್ಯರವರು ಯಾವುದೇ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-19 ನನ್ನ ತಾಯಿಯವರು ಎಂ.ಎಸ್. ರಾಮಯ್ಯರವರಿಗೆ ಬರೆದ ಸಮ್ಮತಿ ಪತ್ರ ಆಗಿರುತ್ತದೆ ಎಂದರೆ ಸರಿ. ಸದರಿ ಪತ್ರಕ್ಕೆ 1 ನೇ ಪ್ರತಿವಾದಿಯು ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿ. ನಿಪಿ-17 ರಲ್ಲಿರುವ ಆಸ್ತಿಗೂ ಹಾಗೂ ದಾವಾಸ್ವತ್ತುಗಳಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ರಾಮಯ್ಯರವರ ಕುಟುಂಬಕ್ಕೂ ಮತ್ತು 1 ನೇ ಪ್ರತಿವಾದಿಯವರ ಸ್ವತ್ತುಗಳಿಗೂ ಯಾವುದೇ

ಸಂಬಂಧ, ಹಕ್ಕು ಹಾಗೂ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯವರಿಗೆ ಅವರ ಗಂಡ ರಾಮಯ್ಯರವರಿಂದ ಬಂದಿರುವ ಆಸ್ತಿಗಳಾಗಿದ್ದು, ಸದರಿ ಆಸ್ತಿಗಳು 1 ನೇ ಪ್ರತಿವಾದಿಗೆ ವಿಲ್ ಮೂಲಕ ಬಂದಿದ್ದು, 1 ನೇ ಪ್ರತಿವಾದಿಯೇ ಸದರಿ ಸ್ವತ್ತುಗಳಿಗೆ ಮಾಲೀಕರಾಗಿರುತ್ತಾರೆ ಹಾಗೂ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**C/C ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ .**